# ಚಳಿ ಚಳಿ ಗೊಂಬೆಮರಿ

ಪುಟ್ಟಿ ಬಳಿ ಇತ್ತು ಒಂದು
ಮುದ್ದು ಮುದ್ದು ಗೊಂಬೆಮರಿ
ಅಳ್ತಾ ಇತ್ತು ಒಮ್ಮೆ ಅದು
ನಂಗೆ ತುಂಬಾ ಚಳಿಚಳಿ

ಗೊಂಬೆ ಕಣ್ಣ ನೀರ ಕಂಡು
ಪುಟ್ಟಿ ತಾನೂ ಅತ್ತಳು
ಗೊಂಬೆಗೊಂದು ಉಣ್ಣೆ ಉಡುಪು
ತೊಡಿಸಬೇಕು ಅಂದಳು

ಅಪ್ಪನನ್ನು ಕಾಡಿಬೇಡಿ
ಪೇಟೆಗೋಡಿ ಹೋದಳು
ಹುಡುಕಿ ಹುಡುಕಿ ಕೆಂಪು ಬಿಳಿ
ಉಣ್ಣೆ ನೂಲು ತಂದಳು

ಅಮ್ಮನನ್ನು ಕೇಳಿ ತಾನೂ
ಹೆಣಿಗೆಯನ್ನು ಕಲಿತಳು
ಹಗಲು ರಾತ್ರಿ ಎನದೆ ಕುಳಿತು
ಅಂಗಿ ಟೋಪಿ ಹೆಣೆದಳು

ಹರುಷದಿಂದ ಎತ್ತಿಕೊಂಡು
ತನ್ನ ಗೊಂಬೆಮರಿಗೆ
ಪುಟ್ಟಿ ತೊಡಿಸಿ ನೋಡಲು
ಪ್ರೀತಿಯಿಂದ ಉಡುಪನು

ಗೊಂಬೆಮರಿ ಕುಣಿಯಿತು
ಹಿರಿ....ಹಿರಿ.... ಹಿಗ್ಗಿ
ವಾ.....ವ್ ! ಎಷ್ಟು ಬೆಚ್ಚಗಿದೆ
ನನ್ನ ಅಂಗಿ ಟೊಪ್ಪಿ

**- ಚಂದ್ರಿಕಾ ಹೆಗಡೆ,**
**ಮತ್ತಿಹಳ್ಳಿ**



# ಅರಿತು ನಡೆದರೆ ಅಪಾಯವಿಲ್ಲ



**ಕಾ**ಡೊಂದರಲ್ಲಿ ನೂರಾರು ಸಂಖ್ಯೆಯಲ್ಲಿ ಕೋತಿಗಳ ಗುಂಪೊಂದು ವಾಸವಾಗಿತ್ತು. ಆದರೆ ಆ ವರ್ಷ ಮಳೆ ಕಡಿಮೆಯಾದ ಕಾರಣ ಕಾಡಿನಲ್ಲಿ ತಿನ್ನಲು ಫಲದ ಕೊರತೆಯಾಗಿ ಅವುಗಳೆಲ್ಲ ಸೇರಿ ಬೇರೊಂದು ಸುರಕ್ಷಿತ ಸ್ಥಳಕ್ಕೆ ವಲಸೆ ಹೊರಟವು. ಹಲವಾರು ಮೈಲುಗಳಷ್ಟು ದೂರ ಸಾಗಿದ ಬಳಿಕ ಅವುಗಳಿಗೆ ದೂರದಲ್ಲೊಂದು ಬಾಳೆತೋಟ ಕಾಣಿಸಿತು. ಪ್ರಯಾಣದಿಂದ ಅಲೆದು ಸುಸ್ತಾಗಿದ್ದ ಅವುಗಳು ಬಾಳೆತೋಟ ನೋಡಿ ಸಂತಸದಿಂದ ಕುಣಿದಾಡಿದವು. ಕೂಡಲೇ ಬಾಳೆತೋಟದ ಬಳಿಗೆ ತೆರಳಿ ಸಾಕಷ್ಟು ಬಾಳೆಹಣ್ಣನ್ನು ತಿಂದವು. ಅದೃಷ್ಟಕ್ಕೆ ಅದು ಯಾರ ಮಾಲೀಕತ್ವದಲ್ಲೂ ಇಲ್ಲದ ತೋಟವಾಗಿದ್ದು. ಫಲವತ್ತಾದ ಪ್ರದೇಶದಲ್ಲಿ ತಾನಾಗೇ ಬೆಳೆದು ನಿಂತಿದ್ದ ತೋಟವಾಗಿತ್ತು.

ಸಾಕಷ್ಟು ಹಣ್ಣುಗಳನ್ನು ತಿಂದು ತೇಗಿದ ನಂತರ ಕೋತಿಗಳಿಗೆ ಬಾಯಾರಿಕೆಯಾಯಿತು. ಕೋತಿಗಳು ಸುತ್ತಲೂ ಎಲ್ಲಾದರೂ ನೀರಿನ ಮೂಲವಿರಬಹುದೆಂದು ಹುಡುಕಾಡಿದಾಗ ಅಲ್ಲಿಯೇ ಸಮೀಪದಲ್ಲಿ ಸುಂದರವಾದ ಕೊಳವೊಂದು ತುಂಬಿ ನಿಂತಿರುವುದು ಕಂಡುಬಂದಿತು. ಅದರ ನೀರು ತಿಳಿಯಾಗಿದ್ದು ಸ್ವಚ್ಛವಾಗಿತ್ತು. ಪುಂಡ ಕೋತಿಗಳು ಅವಸರವಸರವಾಗಿ ಕೊಳದ ಬಳಿಗೆ ತೆರಳಿದಾಗ ತಂಡದಲ್ಲಿದ್ದ ಮುದಿ ಕೋತಿಯು ಅವುಗಳನ್ನು ತಡೆದು ಅವಸರ ಮಾಡಬಾರದೆಂದೂ ಇಲ್ಲಿ ಅಪಾಯದ ಸೂಚನೆಯಿರುವುದಾಗಿಯೂ ಎಚ್ಚರಿಸಿತು. ಹಿರಿಯರ ಮಾತಿಗೆ ಬೆಲೆಕೊಟ್ಟು ಮರಿ ಕೋತಿಗಳು ಸಾವಧಾನದಿಂದ ಸುತ್ತಲಿನ ಪರಿಸರವನ್ನು ವೀಕ್ಷಿಸಲಾಗಿ ನೀರಿನ ಕೊಳಕ್ಕೆ ನೀರು ಕುಡಿಯಲು ಪ್ರಾಣಿಗಳು ಹೋದ ಹೆಜ್ಜೆ ಗುರುತುಗಳಿದ್ದವೇ ಹೊರತು ಒಂದೂ ಪ್ರಾಣಿಯು ಹಿಂದಿರುಗಿ ಬಂದಿರುವ ಗುರುತುಗಳಿರಲಿಲ್ಲ. ಅಪಾಯದ ಮುನ್ಸೂಚನೆಯನ್ನರಿತ ಹಿರಿಯ ಕೋತಿಗಳು ಉದ್ದನೆಯ ಬಿದಿರಿನ ಬೊಂಬುಗಳನ್ನು ತಂದು ಕೊಳದ ದೂರದಲ್ಲಿಯೇ ನಿಂತು ಬೊಂಬಿನ ಸಹಾಯದಿಂದ ಒಂದೊಂದಾಗಿ ಕೊಳದಲ್ಲಿನ ನೀರನ್ನು ಹೀರಿ ಕುಡಿದವು. ಇದನ್ನೆಲ್ಲಾ ನೋಡುತ್ತಿದ್ದ ಕೊಳದಲ್ಲಿದ್ದ ದುಷ್ಟ ಮೊಸಳೆಗಳು ನಿರಾಸೆಗೊಂಡವು. ಅಪಾಯದ ಸುಳಿವು ದೊರೆತಿದ್ದರಿಂದ ಕೋತಿಗಳೆಲ್ಲಾ ಅಲ್ಲಿಂದ ದೂರಕ್ಕೆ ಪ್ರಯಾಣ ಮುಂದುವರೆಸಿದವು.

**-ಪ.ನಾ.ಹಳ್ಳಿ.ಹರೀಶ್ ಕುಮಾರ್**